**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು**

**ಸಿ.ಸಿ. ನಂ: 486/2015**

**ದಿನಾಂಕ: 19-08-2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.**

**ಪಿ.ಡಬ್ಲ್ಯೂ : 02**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್.ಎಂ.ಕೆ ವಕೀಲರಿಂದಃ**

ನಾನು 8 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಈ ಪ್ರಕರಣ ಯಾವ ಕಾರಣಕ್ಕೆ ಹಾಕಿರುತ್ತಾರೆ ಎಂಬ ಮಾಹಿತಿ ನನಗೆ ಇರುತ್ತದೆ. ದೂರಿನಲ್ಲಿ ದೂರುದಾರರು ಏನು ಬರೆದಿರುತ್ತಾರೆ ಎಂದು ನನಗೆ ಮಾಹಿತಿ ಇರುತ್ತದೆ. ದೂರು ಹಾಕುವ ಕಾಲಕ್ಕೆ ದೂರಿನಲ್ಲಿ ನನ್ನನ್ನು ಸಾಕ್ಷಿದಾರರನ್ನಾಗಿ ತೋರಿಸಿರುತ್ತಾರೆ. ಈ ಹಿಂದೆ ಈ ಪ್ರಕರಣದಲ್ಲಿ ನಾನು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿದಿರುತ್ತೇನೆ. ನಾನು ಈ ಮುಂಚೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿದಿರುವುದಿಲ್ಲ ಎಂದರೆ ಸರಿಯಲ್ಲ.

ಆರೋಪಿ ನಂಃ2 ಬೊಮ್ಮನಾಳ ಗ್ರಾಮದಲ್ಲಿ ವಾಸವಿರುತ್ತಾರೆ. 3 ಮತ್ತು 4 ನೇ ಆರೋಪಿತರು ಗೊನಾಳ ಗ್ರಾಮದಲ್ಲಿ ವಾಸವಿರುತ್ತಾರೆ. ಎಷ್ಟು ವರ್ಷದಿಂದ ಸದರಿ ಗ್ರಾಮಗಳಲ್ಲಿ ಅವರು ವಾಸವಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದೂರುದಾರರು ಪಾಲು ವಿಭಾಗ ಕೋರಿ 2 ಮತ್ತು 3 ನೇ ಆರೋಪಿತರ ವಿರುದ್ಧ ದಾವೆ ಹಾಕಿರುತ್ತಾರೆ ಎಂದರೆ ಸರಿ. ಸದರಿ ದಾವೆ ಏನು ಆಗಿರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ. 3 ನೇ ಆರೋಪಿಯು 2009 ರಲ್ಲಿ ಪಾಲು ವಿಭಾಗ ಕೋರಿ ಮೂಲ ದಾವಾ ನಂಃ14/2009 ರಲ್ಲಿ ದಾವೆ ಸಲ್ಲಿಸಿ ಅದು ಅವರ ಪರವಾಗಿ ಆಗಿರುತ್ತದೆ ಎಂದರೆ ಸಾಕ್ಷಿಯು ಆಗಿರಬಹುದು ಎಂದು ನುಡಿಯುತ್ತಾರೆ. ಸದರಿ ದಾವೆ ಹಾಕಿದ ಕಾರಣ 3 ನೇ ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ದೂರುದಾರರು ಈ ಸುಳ್ಳು ದೂರು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

ಆರೋಪಿತರು ದೂರುದಾರರಿಗೆ ವರದಕ್ಷಿಣೆ ಕಿರುಕುಳ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಗಾದಿಗನೂರು ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟಿರುವುದಿಲ್ಲ, ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗಾದಿಗನೂರು ಪೊಲೀಸ್

ಠಾಣೆಗೆ ದೂರು ಕೊಡಲು ನಾನು ಸಹ ಹೋಗಿದ್ದೆ. ಅದರ ದಿನಾಂಕ ಮತ್ತು ವರ್ಷ ನನಗೆ ಹೇಳಲಾಗುವುದಿಲ್ಲ. ಗಾದಿಗನೂರು ಪೊಲೀಸ್ ಠಾಣೆಯವರು ನಮ್ಮ ದೂರು ದಾಖಲಿಸದೆ ಇದ್ದ ಕಾರಣ ಮೇಲಾಧಿಕಾರಿಗಳಿಗೆ ನಾವು ಯಾವುದೇ ದೂರು ಸಲ್ಲಿಸಿರುವುದಿಲ್ಲ.

ಆರೋಪಿತರು ಯಾವುದೇ ತೊಂದರೆ ನೀಡಿರುವುದಿಲ್ಲ, ಈ ಪ್ರಕರಣ ದಾಖಲಿಸಲು ಎಲ್ಲ ಅಂಶಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದೂರುದಾರರು ನನ್ನ ಸ್ವಂತ ಅಕ್ಕ ಆಗಿರುವುದರಿಂದ ಅವರ ಪರವಾಗಿ ಮತ್ತು ಆರೋಪಿತರ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2007 ರಲ್ಲಿ ನನ್ನ ಮಾವ ಪುರಶೊತ್ತಮ್ಮ ರೆಡ್ಡಿ ರವರು ತೀರಿಕೊಂಡ ನಂತರ 2008 ರಲ್ಲಿ ನಮ್ಮ ಅಕ್ಕ ಆರೋಪಿತರ ವಿರುದ್ದ ತಡೆಯಾಜ್ಞೆ ಕೋರಿ ದಾವೆ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನನಗೆ ಈ ಬಗ್ಗೆ ಯಾವುದೇ ಮಾಹಿತಿ ಇರದೆ ಇದ್ದರು ನನ್ನ ಅಕ್ಕನ ಪರವಾಗಿ ಆರೋಪಿತರ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದೂರುದಾರರ ಮದುವೆಯಾದ ದಿನದಿಂದ ಆರೋಪಿತರು ಕುರೆಕುಪ್ಪಾ ಗ್ರಾಮದಲ್ಲಿ ವಾಸವಾಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೆ.ಸರಿ.ಇದೆ.**

**ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಸಂಡೂರು.**